question will be examined after the estimate is received.

ಶ್ರೀ ಎಸ್. ಕರಿಯಪ್ಪ.—ಈ ದೇವಸ್ಥಾನದ ಬಗ್ಗೆ ಕ್ಯೆಗೊಳ್ಳಬೇಕಾಗಿರತಕ್ಕಂಥ ಕೆಲವು ಕಾರ್ಯಕ್ರಮಗಳ ಬಗ್ಗೆ ಆ ದೇವಸ್ಥಾನದ ಧರ್ಮದರ್ಶಿಗಳು ತೀರ್ಮಾನ ಮಾಡಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—Government have not admitted that it is a historical and important place.

ಶ್ರೀ ಎಸ್. ಕರಿಯಪ್ಪ.—ಈ ಕಬ್ಬಾಳದ ಬೆಟ್ಟ ಒಂದು ಚರಿತ್ರಾರ್ಹವಾದ ಸ್ಥಳವಾಗಿದೆಯೆಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೇನೋ ನಾನು ಅಲ್ಲಗೆ ಹೋಗಿನೋಡಿಲ್ಲ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇಂಥ ಚರಿತ್ರಾರ್ಹವಾದ ಸ್ಥಳಗಳಿಗೆ ಅನುಕೂಲಗಳನ್ನು ಕಲ್ಪಿಸುವುದು ಸರ್ಕಾರದವರಿಗೆ ಅವಶ್ಯಕವೆಂದು ಕಂಡು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಸಂಸ್ಥಾನದಲ್ಲಿ ಇಂಥ ಚರಿತ್ರಾರ್ಹವಾದ ಸ್ಥಳಗಳು ಅನೇಕವಾಗಿರುತ್ತವೆ. ಅವುಗಳಿಗೆಲ್ಲಾ ಒಂದೇ ಸಲಕ್ಕೆ ಗಮನಕೊಡಲು ಹಣದ ಅನುಕೂಲತೆ ಇರುವುದಿಲ್ಲ.

Bennikall Tank (Restoration).

Q.—706. Sri KOTRA BASAVANA GOUD (Kudligi).—

Will the Government be pleased to state :—

(*a*) whether they will undertake to restore the breached tank of Bennikall in Kudligi firka of Bellary District ;

(*b*) the area it would irrigate ?

A.—Sri Kadidal MANJAPPA (Minister for Revenue and Public Works).—

(*a*) and (*b*) This has to be investigated.

ಶ್ರೀ ಕೊಟ್ರ ಬಸವನಗೌಡ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡತಕ್ಕ ಬಗ್ಗೆ ಈ ಹಿಂದೆ ಮದ್ರಾಸ್ ಸರ್ಕಾರದವರು ಒಂದು ಅಂದಾಜ ತಯಾರಿಸಿದ್ದರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡಿಕೊಡಬೇಕೆಂದು ಇಲ್ಲಿಗೆ 20 ವರ್ಷಗಳಿಂದಲೂ ಅಲ್ಲಿಯ ಜನರು agitate ಮಾಡುತ್ತಿದ್ದಾರೆ ಅನ್ನುವುದೂ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಶ್ನೆಯನ್ನೆಲ್ಲಾ ನಾನು ಪುನಃ ಪರಿಶೀಲನೆಮಾಡಬೇಕಾಗಿದೆ. ಆದ್ದರಿಂದ ಈಗಲೇ ನಾನೇನೂ ಉತ್ತರ ಕೊಡಲಾರೆ.

Land Release from Date Grove area in Chikmagalur District.

Q.—763. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether there are any representations from landless people to release more lands out of date grove area in Chikmagalur District ;

(*b*) if so, the number of darkhasts pending in this behalf in Chikmagalur District ?

A.—Sri Kadidal MANJAPPA (Minister for Revenue and Public Works).—

(*a*) Yes. In Kadur Taluk, applications are being received for grant of lands out of date groves.

(*b*) Fifty darkhasts in Kadur Taluk, and one darkhast in Chikmagalur Taluk, received from landless and other persons are pending disposal. Information separately regarding applications received from landless and other persons is not readily available.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಈ ಅರ್ಜಿಹಾಕಿರತಕ್ಕವರ ಹೆಸ್ಕೆಕಿ ಎಷ್ಟು ಜನರು ಜಮೀನಿಲ್ಲದವರು ಇದ್ದಾರೆ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳೆಲ್ಲಾ ಈಗ ನನ್ನಲ್ಲಿರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಅರ್ಜಿಗಳೆಲ್ಲಾ ಇತ್ಯರ್ಥವಾಗದೆ ಎಷ್ಟುದಿವಸಗಳಿಂದ ಹೀಗೇ ಮುಲ್ಕಿ ನಿಂತಿರುತ್ತವೆ ?

ಶ್ರೀ ಕಡಿದಾಳ್ ಮಂಜಪ್ಪ.—6-8 ತಿಂಗಳಿಂದ ಹಾಗೆ ನಿಂತಿರಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಈ ಜಮೀನುಗಳನ್ನು ಆ ಅರ್ಜಿದಾರರಿಗೆ ಇನ್ನೆಷ್ಟು ದಿವಸಗಳಲ್ಲಿ release ಮಾಡಬೇಕೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಭಾಗದಲ್ಲಾಗಲೇ ಜಮೀನನ್ನು release ಮಾಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎಲ್ಲಿ ಮರಗಳಿಲ್ಲವೋ ಅಂಥ ಜಾಗದಲ್ಲಿ ಮತ್ತು ಎಲ್ಲಿ ಸಾಗುವಳಿಗೆ ಅವಕಾಶ ಮತ್ತು ಜಮೀನು ಲಾಯಕ್ಕಾಗಿಲ್ಲವೋ ಅಂಥ ಸ್ಥಳದಲ್ಲಿ ಮಾತ್ರ release ಮಾಡಿ ಬಾಕಿ ಕಡೆ ಹಾಗೆ ನಿಲ್ಲಿಸಿಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಮರಗಳು ಜಾಸ್ತಿಯಾಗಿರುತ್ತವೆಯೋ ಅಲ್ಲಿ ಮಾತ್ರ ಈ ಜಮೀನನ್ನು ಇನ್ನೂ release ಮಾಡಿಲ್ಲ ಅಷ್ಟೆ.

ಶ್ರೀ ಜಿ. ಪುಟ್ಟಸ್ವಾಮಿ.—ಮರಗಳು ಇಲ್ಲದೆ ಇರತಕ್ಕ ಕಡೆ ಕೂಡ ಜಮೀನನ್ನು release ಮಾಡದೆ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ? ಹೀಗೆ ಮಾಡಲು ತಮ್ಮ ಉದ್ದೇಶವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆಲ್ಲಾ ಅನೇಕ ನಿಯಮಗಳಿರುತ್ತವೆ. ಅದರ ಪ್ರಕಾರ release ಮಾಡುತ್ತಿದ್ದಾರೆ. ಇಲ್ಲಿಯತನಕ release ಮಾಡದಿದ್ದರೆ ಮುಂದೆ ಮಾಡಲಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇನ್ನೂ ಅನೇಕ ಕಡೆಗಳಲ್ಲಿ ಈ ಈಚಲು ವನಗಳನ್ನು ವ್ಯವಸಾಯಕ್ಕೆ ಬಿಟ್ಟು ಕೊಟ್ಟಿಲ್ಲ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಿ ಒಂದು ಸಮಿತಿಯನ್ನೇ ನೇಮಕಮಾಡಿದೆ. ಅವರ ಶಿಫಾರ್ಸು ಪ್ರಕಾರ ಅವುಗಳನ್ನು release ಮಾಡಲಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಳಸಾಪುರದ ವನವನ್ನು ಆ ಗ್ರಾಮದವರಿಗೆ ಸಾಗುವಳಿಗಾಗಿ ಬಿಟ್ಟುಕೊಟ್ಟಿಲ್ಲ. ಅದನ್ನು ಹಾಗೆ ಸಾಗುವಳಿಗೆ ಬಿಟ್ಟುಕೊಡಬೇಕೇ ಅಥವಾ ಬೇಡವೇ ಅನ್ನತಕ್ಕದ್ದನ್ನು ಯಾರೂ ಕೂಡ ಇಲ್ಲಿಯತನಕ ಪರೀಕ್ಷೆ ಮಾಡಿಲ್ಲ. ಅದನ್ನು ತಾವು ಈಗಲಾದರೂ ಪರಿಶೀಲನೆಮಾಡಿ ಬೇಗ ಬಿಟ್ಟುಕೊಡಲು ಪ್ರಯತ್ನ ಪಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿರತಕ್ಕದ್ದನ್ನು ಪರಿಶೀಲನೆ ಮಾಡುತ್ತೇವೆ. ಅದನ್ನು ಅವರು release ಮಾಡಿರಲೇಬೇಕು. ಏನೇ ಆಗಲಿ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಕಡೂರು ತಾಲ್ಲೂಕಿನಲ್ಲಿ ಈಚಲುವನ ಹೆಚ್ಚಾಗಿರುತ್ತೆಂಬುದು ಎಲ್ಲರಿಗೂ ತಿಳಿದಿದೆ. ಅಲ್ಲಿಗೆ ರೆವೆನ್ಯೂ ಕಮಿಷನರ ಕೈಕೆಳಗೆ ಒಂದು ಸಮಿತಿ ಕೂಡ ಬಂದು ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡಿದ್ದಾಯಿತು. ಅದರೂ ಇದುವರೆಗೆ ಆ ವನಗಳನ್ನು ಸಾಗಿಗೆ ಬಿಟ್ಟುಕೊಟ್ಟಿಲ್ಲ. ಇದಕ್ಕೇನು ಕಾರಣ!

ಶ್ರೀ ಕಡಿದಾಳ್ ಮಂಜಪ್ಪ.—ಆ ಸಮಿತಿಯಲ್ಲಿ ತರಿಕೆರೆಯವರು ಒಬ್ಬ ಮಾನ್ಯನದನ್ಯರಿದ್ದಾರೆ. ಆದರೆ ಅವರಿನ್ನೂ ಆ ಪರಿಶೀಲನೆಯನ್ನು ಮುಗಿಸಿಲ್ಲ ಎಂದು ಕಾಣುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಕಡೂರು ತಾಲ್ಲೂಕಿನಲ್ಲಿ ದೊಡ್ಡನಾಯ್ಕನಹಳ್ಳಿ ಕೆರೆಯ ಹಿಂದೆ ಇರುವ ಈಚಲು ವನವನ್ನು ಏಕೆ ಇನ್ನೂ release ಮಾಡಿಲ್ಲ!

ಶ್ರೀ ಕಡಿದಾಳ್ ಮಂಜಪ್ಪ.—ಅದೆಲ್ಲವನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—6 ತಿಂಗಳಿಂದಲೂ ಇವರು ಕೆಲಸಮಾಡುತ್ತಿದ್ದಾರೆ. ಇನ್ನೂ ಏತಕ್ಕಾಗಿ ಇವರು release ಮಾಡಲು ತಿಳಿಸಿಲ್ಲ? ಹಾಗೆ ಅವರು ರಿಪೋರ್ಟ್ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಅದೆಲ್ಲವನ್ನೂ ಪರಿಶೀಲನೆಮಾಡಿದ್ದು ಮುಗಿದಿಲ್ಲ ಎಂದು ಕಾಣುತ್ತದೆ. ಅದಕ್ಕೆ ಅವರು ಇನ್ನೂ ರಿಪೋರ್ಟು ಮಾಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹೀಗೆ 2 ವರ್ಷಗಳಿಂದಲೂ ಇದು ಪರಿಶೀಲನೆಯಲ್ಲೇ ಉಳಿದರೆ ಆದಿಕರ್ಣಾಟಕರು ಜೀವನ ಮಾಡುವುದು ಹೇಗೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಈ ವಿಚಾರಗಳನ್ನೊಂದನ್ನೂ ಪರಿಶೀಲನೆಮಾಡಿಲ್ಲ. ಆದುದರಿಂದ ನಾನೀಗ ಏನನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಯಾರಾದರೂ ಈ ಜಮೀನುಗಳಿಗೆ ಅರ್ಜಿ ಹಾಕಿದರೆ ಆ ಜಮೀನು ಒಂದು ಇಲಾಖೆಯಿಂದ ವರ್ಗವಾಗಿ ಇನ್ನೊಂದು ಇಲಾಖೆಗೆ ಬರಲು ತುಂಬ ನಿಧಾನವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೂ ಒಂದು ಕಾರಣದಿಂದ ದರಖಾನ್ತು ಅರ್ಜಿಗಳು ನಿಧಾನವಾಗುತ್ತವೆ. ಇದಕ್ಕೆಲ್ಲಾ ಕೆಲವು ನಿಬಂಧನೆಗಳಿವೆ. ಅವುಗಳನ್ನೆಲ್ಲಾ ಅನುಸರಿಸದೆ ಕೆಲಸಮಾಡಬೇಕೆಂದರೆ ಅದು ಸಾಧ್ಯವಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಅನೇಕಕಡೆ ಹಾಗೆ ಯಾವ ಗಿಡಮರಗಳಿಲ್ಲದಿದ್ದರೂ ಈ ಸಮಿತಿಯವರು ಯಾವ ಕೆಲಸವನ್ನೂ ಮಾಡದೆ ಇರುವುದರಿಂದ ಇದು ತುಂಬ ನಿಧಾನವಾಗಲು ಕಾರಣವಾಗಿದೆ ಅನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಯಾವುದೋ ಒಂದು ವಿಚಾರ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದೀರಿ. ಸ್ಪೇಟಿನಲ್ಲಿ ಎಷ್ಟೆಷ್ಟು ಕಡೆ ಹಾಗೆ ಅವಕಾಶವಿದೆ ಅನ್ನತಕ್ಕದ್ದನ್ನೆಲ್ಲಾ ನೆನಪಿನಲ್ಲಿಟ್ಟುಕೊಂಡು ಉತ್ತರ ಹೇಳುವುದಕ್ಕೆ ಕಷ್ಟವಿದೆ. ಇಂಥವಿಚಾರಗಳಿಗೆ ನಾನೀಗ ಉತ್ತರಕೊಡಲು ಸಾಧ್ಯವಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಈ ಚಿಕ್ಕಮಗಳೂರು ಜಿಲ್ಲೆಗೆ ಒಂದು ಸಮಿತಿಯನ್ನು ಮಾಡಿದ್ದೀರೋ ಅಥವಾ ತಾಲ್ಲೂಕು ತಾಲ್ಲೂಕಿಗೆ ಒಂದೊಂದು ಸಮಿತಿಯನ್ನು ಮಾಡಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ನೇಮಕಮಾಡಿರುವುದು ಕೇವಲ ಅಮೃತಮಹಲ್ ಕಾವಲಿಗೋಸ್ಕರವಾಗಿ ಮಾಡಿದ್ದಾಗಿದೆ. ಆ ಸಮಿತಿಯಲ್ಲಿ ಶ್ರೀ ಟಿ. ಸಿ. ಬಸಪ್ಪನವರು ಒಬ್ಬರು ಸದಸ್ಯರಾಗಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಚಿಕ್ಕಮಗಳೂರಿನಲ್ಲಿರುವ ಈ ಜಮೀನುಗಳನ್ನು ಪರಿಶೀಲನೆಯ ಒಂದು ಸಮಿತಿಮಾಡಲಾಗಿದೆ ಎಂದು ಹೇಳಿದಿರಲ್ಲಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಒಂದು ಸಮಿತಿ ವಿನಾ ಮತ್ತೆ ಯಾವುದನ್ನೂ ಮಾಡಿಲ್ಲ.

ಶ್ರೀ ಡಿ. ಆರ್. ಕರೀಗೌಡ.—ಈಗ ತಾವು ಈ ಪಾನ ನಿರೋಧವನ್ನು ಜಾರಿಗೆ ತಂದಿರತಕ್ಕಂಥ ಪ್ರದೇಶದಲ್ಲಿ ಈಚಲುವನವನ್ನು ಏತಕ್ಕಾಗಿ ಇಟ್ಟುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಎಲ್ಲಾ ಜಾಗವನ್ನೂ ಒಂದೇ ಸಲಕ್ಕೆ ಖಾಲಿಮಾಡುವುದಕ್ಕಾಗುವುದಿಲ್ಲ. ಕೆಲವುವೇಳೆ ಗೋವಾಳಕ್ಕೆ ಜಮೀನನ್ನು ಕೊಡಬೇಕಾಗಿ ಬರುತ್ತದೆ. ಆಗ ಈ ಜಮೀನಿಲ್ಲದೆ ಹೋದರೆ ತೊಂದರೆಯಾಗುತ್ತದೆ. ಮಳೆ ಇಲ್ಲದೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದಲೂ ಇದನ್ನು ಇಟ್ಟುಕೊಳ್ಳಬೇಕಾಗಿದೆ. ಇದೂ ಅಲ್ಲದೆ ಕ್ಷಾಮಗಾಲಗಳಲ್ಲಿ ಈ ಈಚಲುಗರಿಯನ್ನು ದನಕರುಗಳಿಗೆ ಮೇವಾಗಿ ಉಪಯೋಗಿಸಬೇಕಾಗುತ್ತದೆ. ಅದಕ್ಕಾಗಿ ಹಾಗೆ ಅವುಗಳನ್ನು ತಡೆದಿರುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಅಥವಾ ಮತ್ತೇನಾದರೂ ಇದನ್ನು ಪುನಃ ಜಾರಿಗೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಹೀಗೆ ಮಾಡುತ್ತಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮೆಲ್ಲರ ಅಭಿಪ್ರಾಯವನ್ನು ಕೇಳದೆ ನಾವು ಯಾವುದನ್ನೂ ಮಾಡುವುದಿಲ್ಲ.

ಶ್ರೀ ಡಿ. ಆರ್. ಕರೀಗೌಡ.—ಈ ಈಚಲುವನಗಳಿರತಕ್ಕ ಜಮೀನು ಈರುಳ್ಳಿ ಬೆಳ್ಳುಳ್ಳಿ—ಅಲೂಗಡ್ಡೆ ಇತ್ಯಾದಿ ಉತ್ಕೃಷ್ಟವಾದಂಥ ಬೆಳೆಗಳನ್ನು ಬೆಳೆಯಲು ಅನುಕೂಲವಾದಂಥ ಜಮೀನ್ ಆಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಡಿ. ಆರ್. ಕರೀಗೌಡ.—ಈ ಜಮೀನುಗಳು ಅಷ್ಟು ಫಲವತ್ತಾಗಿರುವುದರಿಂದ ತಾವು ಇವುಗಳನ್ನು ಹರಾಜು ಮಾಡಿದರೆ ಸರ್ಕಾರಕ್ಕೆ ಸಾವಿರಾರು ರೂಪಾಯಿಗಳ ವರಮಾನ ಬರುವುದಲ್ಲದೆ ಮುಂದೆ

ಜಮಾನ್ ಕಂದಾಯದ ರೂಪವಾಗಿ ಬೇರೆ ಸರ್ಕಾರಕ್ಕೆ ವರಮಾನ ಬರುತ್ತದೆ ಅನ್ನುವುದು ತಮಗೆ ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹಣ ಪಡೆಯುತಕ್ಕಂಥ ಒಂದೇ ದೃಷ್ಟಿಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹೆಂಡ ಇಳಿಸುವುದಕ್ಕೆ ಈಚಲುಮರಗಳು ರಿಸರ್ವ್‌ಆಗಿ ಇರಬೇಕೆಂಬುದು ಕಾಂಗ್ರೆಸ್ ನೀತಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೆಂಡ ಇಳಿಸುವುದಕ್ಕೆ ಈಚಲುಮರಗಳು ರಿಸರ್ವ್ ಇರಬೇಕೆಂದು ಹೇಳುತ್ತಾ ಇಲ್ಲ.

ಶ್ರೀ ಡಿ. ಆರ್. ಕರಿಗೌಡ.—ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಈಚಲುವನಗಳಿರಬೇಕೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈಚಲುವನ ಇರುವ ಅನೇಕ ಗ್ರಾಮಗಳಲ್ಲಿ ಸಾಕಾದಷ್ಟು ಗೋಮಾಳ ವಿರುವುದಿಲ್ಲ; ಅಂತಹ ಪ್ರದೇಶಗಳಲ್ಲಿ ಈಚಲುವನ ಕಡಿದು ಸಾಗುವಳಿಗೆ ಕೊಟ್ಟರೆ ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ.

Sri A. BHEEMAPPA NAIK.—Were not the date groves originally intended for extraction of toddy?

Sri Kadidal MANJAPPA.—That was the object.

Sri A. BHEEMAPPA NAIK.—At that time was there not other gomal lands used for grazing purposes?

Sri Kadidal MANJAPPA.—Since 1943, plenty of gomal has been disposed of for cultivation under the assumption that these date groves will be serving as gomal.

Sri A. BHEEMAPPA NAIK.—Whatever remains after State Reserves, would you kindly see that they are given for cultivation purposes?

Sri Kadidal MANJAPPA.—I cannot announce the policy of Government straightaway. It all depends on the circumstances of each place.

Sri A. BHEEMAPPA NAIK.—Is the halting policy of the Government due to the possibility of removing prohibition again and making those areas wet?

Sri Kadidal MANJAPPA.—That inference is unwarranted, Sir.

Sri A. BHEEMAPPA NAIK.—Would the Government assure us that whatever area is intended for grazing purposes is reserved and the remaining area disposed of for cultivation purposes?

Sri Kadidal MANJAPPA.—The land which contains thick growth of trees cannot be released for cultivation. Wherever it is possible, we will think of releasing them.

Sri A. BHEEMAPPA NAIK.—Are the Government aware that even though people feel that these areas are better needed for cultivation, for a future possibility of removing prohibition and making use of these. . . .

Mr. SPEAKER.—That has been stated over and over again.

Sri A. BHEEMAPPA NAIK.—Then may I ask whether these areas will be demarcated either for gomal or for cultivation purposes?

Sri Kadidal MANJAPPA.—Sir, as the Hon'ble Member knows, in any State, at least one-fourth of the area should be either forest or other lands containing trees. As a matter of policy, it is not correct to dispose of the date groves for cultivation. It is in the interests of the villagers and the general public to reserve certain areas where there is thick growth of these trees.

Sri A. BHEEMAPPA NAIK.—What is the total area now reserved, Sir?

Sri Kadidal MANJAPPA.—I want notice.

ಶ್ರೀ ಟಿ. ಎ. ಮೂಡಲಗಿರಿಗೌಡ.—Date groveಗಳಿಂದ ಏನೇನು ಪ್ರಯೋಜನವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿದ್ದೇವೆ.

ಶ್ರೀ ಟಿ. ಎ. ಮೂಡಲಗಿರಿಗೌಡ.—ಏನೇನು ಪ್ರಯೋಜನವಾಗುತ್ತದೆ?

Sri H. SIDDAVEERAPPA.—It will be made use of for industrial purposes. There is a Committee of the Government of India which has been constituted to find out how best these date groves may be made use of. ಬೆಲ್ಲ ಮತ್ತು ನೀರಾ ತಯಾರು ಮಾಡುವುದಕ್ಕೂ, ಬಾಕಿ ವಿಷಯದಲ್ಲಿಯೂ ಅವು ಬಡವರಿಗೆ ಬಹಳ ಮುಖ್ಯವಾಗಿರಬೇಕು.

ಶ್ರೀ ಟಿ. ಎ. ಮೂಡಲಗಿರಿಗೌಡ.—Date-groves ನಾಶಪಡಿಸುವುದು ಸರಿಯಾದುದಲ್ಲ ಎಂದು ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಸರ್ಕಾರದ ನೀತಿಯೆಂದು ಮಾನ್ಯ ಸ್ನೇಹಿತರೇ ಹೇಳಿದ್ದಾರೆ.

ಶ್ರೀ ಟಿ. ಎ. ಮೂಡಲಗಿರಿಗೌಡ.—ನೀರಾ ತೆಗೆಯುವುದನ್ನು, ಬೊಂಬಾಯಿ ಸರ್ಕಾರವು ಏರ್ಪಾಡು ಮಾಡಿದಹಾಗೆ, ಬಡಕಲು ಮಿನಿಸ್ಟರ್ ಆದ ಶ್ರೀವಾಕಡಿದಾಳ್ ಮಂಜಪ್ಪನಂತಹವರು ಉಪಯೋಗಿಸುವುದಕ್ಕೋಸ್ಕರ ಏನಾದರೂ ಏರ್ಪಾಡು ಮಾಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ದಪ್ಪದಪ್ಪವಾಗಿರುವವರಿಗೂ ಪ್ರಯೋಜನವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೋಮಾಳ ಸಾಕಾದಷ್ಟು ಇದ್ದಕಡೆ date-groves ನ್ನು ವಿಲೇವಾರಿ ಮಾಡುವ ವಿಷಯದಲ್ಲಿ ಸರ್ಕಾರದ ನೀತಿ ಏನು?

ಶ್ರೀ ಕಡಿದಾಳ್ ಮಂಜಪ್ಪ.—ಕೈಗಾರಿಕೆಯ ದೃಷ್ಟಿಯಿಂದ date-groves ಕೆಲವು ಕಡೆ ಇರುವುದು ಅಗತ್ಯ. ಕೆಲವು ಕಡೆಗಳಲ್ಲಿ ಬೆಲ್ಲ ತೆಗೆಯುವುದಕ್ಕೆ ಸಾಧ್ಯವಿದೆ. ಕೆಲವು ಕಡೆಗಳಲ್ಲಿ ಈಚಲು ಚಾಪೆ ಹೆಣೆಯುವ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ಈ ಕಾರಣದಿಂದ ಹೆಚ್ಚು ಮರಗಳ ಇರತಕ್ಕ ಪ್ರದೇಶಗಳನ್ನು ರಿಲೀಜ್ ಮಾಡುವುದರಲ್ಲಿ ನ್ಯಾಯವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೆಲ್ಲಿ ಈ ರೀತಿ ಹೆಚ್ಚಿಗೆ date-groves ಇವೆಯೋ ಅಂತಹ ಸ್ಥಳಗಳಲ್ಲಿ ಚಾಪೆ ಹೆಣೆಯುವ ಮತ್ತು ಇತರ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ನೀತಿಯನ್ನು ಅನುಸರಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಕಡೆಗಳಲ್ಲಿ ಹಳ್ಳಿಗಳಲ್ಲಿ ಗ್ರಾಮಸ್ಥರೇ ಮರದ ಗರಿಗಳನ್ನು ತೆಗೆದು ಚಾಪೆಯನ್ನು ತಯಾರು ಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಗರಿಯನ್ನು ತೆಗೆದು ಚಾಪೆಯನ್ನು ಮಾಡುವುದು ದೊಡ್ಡ ಮರಗಳಿಂದಲ್ಲ. Toddy-bearing ಮರಗಳಿಂದಲ್ಲ. ಅವುಗಳನ್ನು ಸಣ್ಣ ಸಣ್ಣ ಮರಗಳಿಂದ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—I think my Hon'ble friend is not correctly informed. ಸಣ್ಣ ಗಿಡಗಳಿಂದಲೂ, ದೊಡ್ಡ ಗಿಡಗಳಿಂದಲೂ ಈ ರೀತಿ ಚಾಪೆಗಳನ್ನು ತಯಾರು ಮಾಡುವುದಕ್ಕಾಗುತ್ತದೆ. ತಮಗೆ ಗೊತ್ತಿದ್ದಹಾಗೆ ಚಾಪೆಯನ್ನು ಮಾಡುವುದು ರೈತರ ಕೆಲಸಕ್ಕೆ ಮೂಲಾಧಾರವಾದುದು.

ಶ್ರೀ ಬಿ. ರಾಚಯ್ಯ.—ಈಚಲು ಮರಗಳು ಒತ್ತಡವಾಗಿ ಬೆಳೆಯುವ ಪ್ರದೇಶವನ್ನು ಗೋಮಾಳಕ್ಕೆ ಇಟ್ಟುಕೊಳ್ಳುವುದರಿಂದ ಅಲ್ಲಿ ಹುಲ್ಲು ಬೆಳೆಯುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹುಲ್ಲು ಕೆಲವುಕಡೆ ಸೊಗಸಾಗಿ ಬೆಳೆಯುತ್ತದೆ. ಅಭಾವದ ಕಾಲದಲ್ಲಿ ಗರಿಗಳು ದನಗಳಿಗೆ ಮೇವಾಗಿ ಪರಿಣಮಿಸುತ್ತವೆ.

Sri T. HANUMAIYA.—Prohibition introduce ಮಾಡುವ ವಿಷಯದಲ್ಲಿ ಸರ್ಕಾರಕ್ಕೆ ನಂಬಿಕೆ ಇದೆಯೇ ?

Sri Kadidal MANJAPPA.—That has been answered.

ಶ್ರೀ ಟಿ. ಹನುಮಯ್ಯ.—ಈಚಲ ವನ reserve ಮಾಡಿರುವುದು ಹೆಂಡ ಇಳಿಸುವುದಕ್ಕೋ ಅಥವಾ ಇನ್ನೊಂದು ಕಡೆಗೆ ಸಾಗಿಸುವುದಕ್ಕೋ ? ಯಾವ ಉದ್ದೇಶಕ್ಕಾಗಿ reserve ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಸಂಬಂಧಪಟ್ಟ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಟಿ. ಹನುಮಯ್ಯ.—Reserve ಮಾಡಿದ ಮರಗಳಿಂದ ಬೇರೆಕಡೆಗೆ ಹೆಂಡ ಸಾಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Electricity (Supply to I. P. sets at Hariyabbe in Hiriyur Taluk).

Q.—696. Sri V. MASIYAPPA (Hiriyur).—

Will the Government be pleased to state :—

(*a*) whether the ryots of Hariyabbe in Hiriyur Taluk, have deposited money for power supply for I. P. sets ;

(*b*) whether any estimate has been prepared for this place ;

(*c*) whether the estimate has been sanctioned ?

A.—Dr R. NAGAN GOWDA (Minister for Agriculture).—

(*a*) Yes.
(*b*) Yes.
(*c*) No.

Sri V. MASIYAPPA.—May I know when these deposits were made ?

Dr. R. NAGAN GOWDA.—Sir, I am not able to say when these deposits were made. But according to the information gathered here, it was in the years 1953-54 and 1954-55. Sometime during these years, deposits were made.

Sri V. MASIYAPPA.—May I know where the estimates are pending ?

Dr. R. NAGAN GOWDA.—Sir, some of these have not been taken up because during 1954-55 the amount we had sanctioned for I.P. sets had been exhausted. They will be taken up this year. Regarding I.P. sets for Hoovinahole and Kasturi Rangappanahalli, they were found to be unworkable. With regard to the other vllages, the estimates are under preparation.

Sri V. MASIYAPPA.—In some cases, estimates are already prepared. May I know where they are pending ?

Dr. R. NAGAN GOWDA.—They are pending sanction and these will come up for sanction under the grant for 1955-56.

Sri V. MASIYAPPA.—Since the new year has commenced, may I know if the estimates are with the Government or with the department ?

Dr. R. NAGAN GOWDA.—We will be now getting the estimates and they will be sanctioned.

Sri V. MASIYAPPA.—Has it come to the notice of the Government that nearly 70 to 80 per cent of pumps are already working with oil engines ?

Dr. R. NAGAN GOWDA.—Yes. Those who are working with oil engine;